ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಎಲ್ಲಾ ತಾಲ್ಲೂಕುಗಳಲ್ಲಿ ದೊರಿಯಬಹುದಾದ ಪಸಾರೆ ಬಾಬನ್ನು ಆಗಸ್ಟು 26ನೆ ಮುರ್ತುಂನ ನೋಟಿಫಿಕೇಷನ್‌ನಲ್ಲಿ ಕಂಡ ತಾರೀಖುಗಳಲ್ಲಿ ಆಯಾಯ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚು ಅಂಶ ತಿಳಿಯಬೇಕಾದರೆ 1909ನೆ ಇಸವಿ ಆಗಸ್ಟು 26ನೆ ಮುರ್ತುಂನ ಮೈಸೂರು ಗೆಜೆಟ್ಟಿನ 11ನೆ ಭಾಗದ 690—691ನೆ ಪುಟಗಳಲ್ಲಿ ಪ್ರಾಯಿಷಾಗಿರುವ ನೋಟಿಫಿಕೇಷ್ಣಗೆ ನಿಗಾ ಕೊಡತಕ್ಕದ್ದು.

ಹೆಚ್. ರಾಮೈಯ್ಯ,
ಫಾರ್ ಡೆಪ್ಯೂಟಿ ಕಮಿಷನರ್, ಕೋಲಾರ ಡಿಸ್ಟ್ರಿಕ್ಟು.

ತಾರೀಖು ನೆ ಜೂನ್ 1909.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ-ಈ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟು ಮತ್ತು ಪ್ರೊಟೆಕ್ಟೆಡ್ ವಿನಹ) ಹಿಡುವಳಿಯಲ್ಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕೆ ಚಕ್ಕೆಯನ್ನು 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1911ನೆ ಇಸವಿ ಜೂನ್ 30ನೆ ತಾರೀಖು ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ನಮೂದಿಸಿರುವ ತಾರೀಖಿನಲ್ಲಿ ಮತ್ತು ಸ್ಥಳದಲ್ಲಿ ಆಯಾಯ ತಾಲ್ಲೂಕು ಅಮಲ್ದಾರ್ರು ಮತ್ತು ಫಾರೆಸ್ಟು ಆಫಿಸರುಗಳಿಂದ ಹರಾಜು ಮಾಡಿಸುತ್ತೆ:—

ನಂಬರ್.	ತಾಲ್ಲೂಕು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.	ಹರಾಜು ಮಾಡಿಸುವ ಆಫಿಸರ ಹೆಸರು
1	ತರೀಕೆರೆ ...	15—9—09	ತಾಲ್ಲೂಕ ಕಛೇರಿಯಲ್ಲಿ.	ಅಮಲ್ದಾರ್ರು ಮತ್ತು ಫಾರೆಸ್ಟ್ ರೇಂಜಾಫಿಸರು.

ನೋಟು—ಹರಾಜು ಅವಶ್ಯಕ ಕಂಡರೆ ಸಂಮತುವಾರಾಗಿ ಮಾಡಿಸಲ್ಪಡುತ್ತೆ.

2. ಆಯಾಯ ತಾರೀಖಿನ ಮಧ್ಯಾಹ್ನದಲ್ಲಿ ಹರಾಜು ಪ್ರಾರಂಭಿಸಲ್ಪಡುತ್ತೆ.

3. ಹರಾಜು ಡೆಪ್ಯೂಟಿ ಕಮಿಷ್ಣರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲೀ ಅಥವಾ ಕ್ರಮಪ್ರಕಾರ ಮೊಖ್ತ್ಯಾರಿ ಇಟ್ಟಿಸಿದ ವಕೀಲರ ಮುಖಾಂತ್ರವಾಗಲಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡಲೆ ಛಡ ಸವಾಲ್ದಾರನು ನಗದಾಗಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ್ ರೂಪಾಯಿ ಬಂದಕ್ಕೆ ಬಂದಾಣೆ ವೇರಿಗೆ ಕೀರಿಸಿ ಒಟ್ಟು ಹಣದಲ್ಲಿ $\frac{1}{4}$ ಹಿಸ್ಸೆಯನ್ನು ಡಿಪಾಜಿಟ್ ಹಾಜರ್ಮಾಡಬೇಕು. ಆ ಪ್ರಕಾರ ಹಾಜರ್ಮಾಡದೆ ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನ ಪುನಃ ಹರಾಜು ಮಾಡಲ್ಪಡುತ್ತೆ.

6. ವೇಲೆ ಹೇಳಿದಂತೆ ದುಸರಾ ಹರಾಜು ಮಾಡಿಸುವದರಲ್ಲಿ ಲುಕ್ಸಾನಿಗೆ ಅವ್ವಲ್ ಹರಾಜುದಾರ ಗರಿಯಾಗತಕ್ಕದ್ದು. ಆ ದುಸರಾ ಹರಾಜಿನಲ್ಲಿ ಲಾಭ ಬಂದರೆ ಅವನಿಗೇನೂ ಹಕ್ಕು ಇರುವದಿಲ್ಲ. ನಷ್ಟ ಬಂದರೆ ಮೊದಲು ಹರಾಜಿನಲ್ಲಿ ಬಂದ ಸವಾಲ್ ಮೊಬಲಗಿಗೂ, ಎರಡನೆ ಹರಾಜಿನಲ್ಲಿ ಬಂದ ಹಣಕ್ಕೂ ಕಮ್ಮಿ ಬೀಳುವ ಹಣವನ್ನ ಅವ್ವಲ್ ಹರಾಜುದಾರ್ರಿಂದ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

7. ಛಡ ಸವಾಲ್ದಾರನು ಬಾಕಿ $\frac{3}{4}$ ಹಿಸ್ಸೆ ಹಣವನ್ನು ಮತ್ತು ಅದರ ಲೋಕಲ್ ಸೆಸ್ ಸಹಿತ ಹರಾಜು ತಾರೀಖು ಲಾಗಾಯಿತು ಒಂದು ತಿಂಗಳವಳಗೆ ಪಾವತೀ ಮಾಡಬೇಕು. ತಪ್ಪಿದರೆ ಮೊದಲು ಇಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಕೀರಿಸಲ್ಪಡುತ್ತೆ. ಇದಲ್ಲದೆ ಮುಂದೆ ಜಮಾಯಿಸಿಕೊಳ್ಳುವದಕೆ ಅವಕಾಶಕೊಡದೆ ಇಜಾರೆ ಹಕ್ಕು ತಪ್ಪಿಸುತ್ತೆ. ಬಾಕೀ ಏನಾದರೂ ಮೊಬಲಗು ನಿಂತರೆ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

8. ಹರಾಜು ಮಂಜೂರಿಯ ಸಂಗತಿಯನ್ನ ಹರಾಜುದಾರ್ರಿಗೆ ತಿಳಿಸಿದ (3) ಮೂರುದಿವಸಗಳಲ್ಲಿ ಸರಿಯಾದ ಛಾಪಾ ಕಾಗದ್ದಲ್ಲಿ 9ನೆ ಪ್ಯಾರಾದಲ್ಲಿ ಕಂಡ ಷರತ್ತುಗಳ ವೇರಿಗೆ ನಡದುಕೊಳ್ಳಲು ಬದ್ಧನಾಗಿ ಇರುವಂತೆ ಹರಾಜುದಾರನು ಮುಚ್ಚಳಿಕೆ ಬರದುಕೊಡಬೇಕು.

ಈ ಕೆಳಗೆ ನಮೂದಾಗುವ ಷರತ್ತುಗಳ ವೇರಿ ಹರಾಜುದಾರ್ರು ನಡದುಕೊಳ್ಳಬೇಕು:

(1) ಒಂದು ವರುಷಕ್ಕೆ ಒಳಪಟ್ಟ ಗಿಡಗಳನ್ನ ಕಡಿಸುಕೂಡದು

(2) ತೊಬಿ ತೆಗವ ಕಡ್ಡಿಗಳು ಇಜಾರೆದಾರನದಾಗಿ ಇರತಕ್ಕದ್ದು.

( ) ಇಜಾರೆ ವೇರೆ ಸಾಗಿಸಿಕೊಂಡ ಚಕ್ಕೆ ಮೊತ್ತವ ತಪಶೀಲ್ ಲೆಕ್ಕ ಇಡಬೇಕು. ತಾಲ್ಲೂಕ ಅಮಲ್ದಾರ್ರು ಅಥವಾ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರಿಂದ ನೇಮಿಸುವ ಇತರ ಆಫಿಸರು ಲೆಕ್ಕ ತನಿಖೇ ಮಾಡಲು ಬಂದಾಗ ಲೆಖ ತೋರಿಸಬೇಕು.

(4) ಡೆಪ್ಯುಟಿ ಕಮಿಷನರ್ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಗೆ ಪ್ಯಾಸ್ ಪಡಿಯಬೇಕು.

(5) 1911ನೆ ಇಸವಿ ಜೂನ್ ಆಖೈರು ವಳಗಾಗಿ ಕಡದು ಜಮಾಯಿಸಿಕೊಂಡು ಇರುವ ಚಕ್ಕೆಯನ್ನೆಲ್ಲಾ ಆಯಾಯ ತಾಲ್ಲೂಕಿನ ಸರಹದ್ದಿನ ಹೊರಕ್ಕೆ ಸಾಗಿಸಿಬಿಡಬೇಕು.

(6) ಮೇಲ್ಕಂಡ ಪರತ್ತುಗಳಲ್ಲಿ ಯಾವದಕ್ಕಾಗಲೀ ತಪ್ಪು ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೆ ಸಾಗಿಸದೇ ನಿಂತಿರುವ ಚಕ್ಕೆ ವಿಶಿಷ್ಟವೂ ಸರ್ಕಾರಕ್ಕೆ ಕೇರಿಗಲ್ಪಡುತ್ತೆ.

(7) ತಂಗಡಿ ಗಿಡಗಳನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸೊಪ್ಪಿಗಾಗಿ ಆಗಲಿ, ಸಾದೇ ಬಗ್ಯಾಗಲೀ ಅಥವಾ ಇನ್ಯಾವದಕ್ಕಾಗಲೀ ಕಡಿಯಕೂಡದು.

ಬಿ. ಹಿರಾಸಿಂಗ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಕಡೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 10ನೆ ಆಗಸ್ಟು 1909.

ನಾಗಮಂಗಲ ತಾಲ್ಲೂಕು ಈಸಬಾ ಹೋಬಳಿಗೆ ಕೇರಿದ ಜೋಡಿ ಹುಲ್ಲೇಕೆರೆ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ನಾಗಮಂಗಲ ತಾಲ್ಲೂಕು ಕಚೇರಿಯಲ್ಲಿ 1909ನೆ ಸೆಪ್ಟಂಬರ್ ಮಾಹೆ 20ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಫ್ಸೀಲ್ ಬಗ್ಗೆ 19—8—1909ನೆ ಮುಕ್ರಂ 3ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 678-679ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 16ನೆ ಆಗಸ್ಟು 1909.

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಮೇಲ್ಕೋಟೆ ಹೋಬಳಿಗೆ ಸೇರಿದ ಜೋಡಿ ರಾಮಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಕಚೇರಿಯಲ್ಲಿ 1909ನೆ ಸೆಪ್ಟಂಬರ್ ಮಾಹೆ 30ನೆ ತಾರೀಖು ದಿವಸ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಫ್ಸೀಲ್ ಬಗ್ಗೆ 1909ನೆ ಇಸವಿ ಆಗಸ್ಟು 26ನೆ ಮುಕ್ರಂ ಮೈಸೂರು ಗೆಜೆಟ್ಟಿನ 2ನೆ ಭಾಗದ 698ನೆ ನಂಬರು ಪೇಜು ನೋಡತಕ್ಕದ್ದು.

ಎಸ್. ವೆಂಕಟರಂಗೆಂ,
ಫಾರ್ ಡೆಪ್ಯುಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಸ್ರ 1909ನೆ ಆಗಸ್ಟು 7ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು.

ಅಫಿಷಿಯಲ್ ಮೆಂಬರುಗಳು.

(1) ಮು|| ರಾ|| ರಾ|| ಕೆ. ಶ್ರೀನಿವಾಸರಾಯರು, (ಪ್ರೆಸಿಡೆಂಟ್).
(2) ಚಿತ್ರದುರ್ಗದ ಡಿಸ್ಟ್ರಿಕ್ಟು ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರು.
(3) ಚಿತ್ರದುರ್ಗ ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರವರು.
(4) ದಾವಣಗೆರೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
(5) ಚಿತ್ರದುರ್ಗದ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು, (ಗೈರ್ ಹಾಜರು)
(6) ಚಿತ್ರದುರ್ಗ ಡಿಸ್ಟ್ರಿಕ್ಟು ಸ್ಕೂಲ್ ಡೆಪ್ಯುಟಿ ಇನ್‌ಸ್ಪೆಕ್ಟರವರು.
(7) ಬೋರ್ಡಿನ ವೈಸ್ ಪ್ರಸಿಡೆಂಟರವರು.

ನಾನ್ ಅಫಿಷಿಯಲ್‌ಮೆಂಬರುಗಳು.

1. ಮು|| ರಾ|| ಪಿ. ನಂಜುಂಡಪ್ಪನವರು.
2. ,, ಮಹಮದ್ ದಸ್ತಗಿರಿ ಸಾಹೇಬರು, (ಗೈರ್ ಹಾಜರು)
3. ,, ಎಂ. ಅನಂತಶೆಟ್ಟರು.
4. ,, ಕಾನುಭೋಗ ಸುಬ್ಬಾಣಿಯವರು.
5. ,, ಜಿಳಗಟ್ಟೆ ಅಜ್ಜಪ್ಪನವರು.
6. ,, ನಾಡಿಗ ಸಿದ್ದರಾಮಯ್ಯನವರು.
7. ,, ಮುತ್ತುಗದೂರು ಪರ್ವತಪ್ಪನವರು.